<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ</u>

<u>ಅಸಲು ದಾವಾ ಸಂ. 25/2019. .W.-1.</u>

ಈ ದಿನ ದಿಃ17.10.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು</u> ಃ 1 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರಿಂದಃ-

ದಾವಾ ಆಸ್ತಿಯು ನನ್ನ ಮಾವನ ತಾಯಿ ನಂಜಮ್ಮ ರವರ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ಉಳಿದ ಪ್ರತಿವಾದಿಯರಿಗೆ ದಾವಾ ಅಸ್ತಿಯು ಚಂದ್ರಪ್ಪನ ಸ್ವಯಾರ್ಜಿತ ಆಸ್ತಿಯಾದ ಕಾರಣ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಚಂದ್ರಪ್ಪ ರವರು ತನ್ನ ಮಗಳಾದ 4 ನೇ ಪ್ರತಿವಾದಿಗೆ 4 ಎರೆ 2 ಗುಂಟೆ ಜಮೀನನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 2 ಎಕರೆ 2 ಗುಂಟೆ ಜಮೀನನ್ನು ದಿಃ01.09.2010 ರಂದು 4 ನೇ ಪ್ರತಿವಾದಿಯು 5 ನೇ ಪ್ರತಿವಾದಿಗೆ ಮಾರಾಟ ಮಾಡಿ ಮತ್ತು ಸ್ವಾಧೀನವನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲದ ಆಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

6 ನೇ ಪ್ರತಿವಾದಿಗೂ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರು ಸಹ ದಾವಾ ಆಸ್ತಿಯನ್ನು ಅಕ್ರಮವಾಗಿ ಲಪಟಾಯಿಸಲು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> ಃ 6 ನೇ ಪ್ರತಿವಾದಿ ಪರ ವಕೀಲರಿಂದಃ-

ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ನನ್ನ ಮಾವ ಚಂದ್ರಪ್ಪನಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬರು ಹೆಣ್ಣುಮಕ್ಕಳು ಎಂದರೆ ಸರಿ. ನನ್ನ ಗಂಡ, 2 ನೇಪ್ರತಿವಾದಿ ಮತ್ತು 3 ನೇ ಪ್ರತಿವಾದಿಯ ಗಂಡ ಸದರಿಯವರ ಮಕ್ಕಳು ಎಂದರೆ ಸರಿ. 4 ನೇ ಪ್ರತಿವಾದಿ ಒಬ್ಬ ಹೆಣ್ಣು ಮಗಳು ಎಂದರೆ ಸರಿ. ದಾವಾ ಆಸ್ತಿಯಲ್ಲಿ ಸದರಿ ಚಂದ್ರಪ್ಪ ಮತ್ತು ಅವರ ಎಲ್ಲಾ ಮಕ್ಕಳಿಗೂ ಸಮನಾದ ಹಿಸ್ಸೆ ಇದೆ ಎಂದರೆ ಸರಿ. 2 ನೇ ಪ್ರತಿವಾದಿಯ ಹೆಂಡತಿಯ ಊರು ಖ್ಯಾತನ ಬೀಡು ಮತ್ತು ಅವರ ಹೆಸರು ಪಾರ್ವತಮ್ಮ ಎಂದರೆ ಸರಿ. ಅವರ ಒಬ್ಬಳೇ ಮಗಳು 6 ನೇ ಪ್ರತಿವಾದಿ ಎಂದರೆ ಸರಿ. ಮದುವೆಯಾದ

ನಂತರ ಸದರಿ ಪಾರ್ವತಮ್ಮ ಕೋರನಹಳ್ಳಿಯಲ್ಲಿ 1 ವರ್ಷ ಮಾತ್ರ ವಾಸವಿದ್ದರು ಎಂದರೆ ಸರಿ. ಅವರು ಹೆರಿಗೆಗೆ ಹೋದ ನಂತರ ಮನೆಗೆ ಬಂದಾಗ 1 ರಿಂದ 4ನೇ ಪ್ರತಿವಾದಿಯರು ಮನೆಯಲ್ಲಿ ಬಿಟ್ಟುಕೊಳ್ಳಲಿಲ್ಲ ಎಂದರೆ ಸರಿ. ಹಾಗಾಗಿ ಅವರು ತವರು ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. 2ನೇ ಪ್ರತಿವಾದಿಯ ಹಿಸ್ಸೆಯಲ್ಲಿ 6ನೇ ಪ್ರತಿವಾದಿಗೂ ಸಹಃ ಅರ್ಧ ಹಿಸ್ಸೆ ಇದೆ ಎಂದರೆ ಸರಿ.

ನನ್ನ ಗಂಡ ಹಾಗೂ 6ನೇ ಪ್ರತಿವಾದಿಗೆ ಹಿಸ್ಸೆ ನೀಡಬಾರದು ಎಂದು ದಿಃ01.09.2010 ರಲ್ಲಿ 1ನೇ ಪ್ರತಿವಾದಿಯ ಗಂಡ , 2ನೇ ಪ್ರತಿವಾದಿ ಹಾಗೂ 3ನೇ ಪ್ರತಿವಾದಿಯ ಗಂಡ ಮತ್ತು 4ನೇ ಪ್ರತಿವಾದಿ ಮೋಸದಿಂದ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದಲ್ಲಿ ನನ್ನ ಮಾವನಿಗೆ 2 ಎಕರೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ 2ನೇ ಪ್ರತಿವಾದಿ ರೂ.25 ಸಾವಿರ ಹಣ ತನ್ನ ಭಾಗಕ್ಕೆ ಬದಲಾಗಿ ಪಡೆದುಕೊಂಡಿರುತ್ತಾರೆ ಎಂದರೆ ಸುಳ್ಳು. ಸದರಿ ವಿಭಾಗ ಪತ್ರದಲ್ಲಿ 4ನೇ ಪ್ರತಿವಾದಿಗೆ 2 ಎಕರೆ 2 ಗುಂಟೆ ಕೊಟ್ಟಿರುತ್ತಾರೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸದರಿ ಜಮೀನನ್ನು 4ನೇ ಪ್ರತಿವಾದಿ 5ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

ನನ್ನ ಮಾವನಿಗೆ ಬಂದ ಜಮೀನನ್ನು ನನ್ನ ಮಾವ, 2ನೇ ಪ್ರತಿವಾದಿ ಮತ್ತು 4ನೇ ಪ್ರತಿವಾದಿ ಪುನಾ ವಿಭಾಗವನ್ನು ದಿಃ16.04.2013 ರಲ್ಲಿ ಮಾಡಿಕೊಂಡಿರುತ್ತಾರೆ ಎಂದರೆ ನಮ್ಮನ್ನು ಬಿಟ್ಟು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಅಸ್ತಿಯಲ್ಲಿ ನನಗೆ ಹಕ್ಕು ಇರುವಂತೆ 6ನೇ ಪ್ರತಿವಾದಿಗು ಸಹಃ ಹಕ್ಕು ಇದೆ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

sd/xxx

(ಸಂತೋಷ್ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.